ಕಥೆಗಳ ಕಂಬಳಿ

ಫೇರಿದೆ ವುಲಫ್

ಕಥೆಗಳ ಕಂಬಳಿ

ಫೇರಿದೆ ವುಲಫ್

ಬಾಬ್ಬ ಜಾರ್ರ್ರಹ ಮಂಜಿನಿಂದ ಮುಚ್ಚಿದ ಬೆಟ್ಟಗಳ ನಡುವೆ ಒಂದು ಚಿಕ್ಕ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಹಳ್ಳಿಯ ಮಕ್ಕಳಿಗೆ ಅವರ ಹಳೇಯ, ವಿಶಾಲವಾದ ಉಣ್ಣೆಯ ಕಂಬಳಿಯ ಮೇಲೆ ಆರಾಮವಾಗಿ ಕೂತುಕೊಂಡು ಬಾಬ್ಬ ಜಾರ್ರ್ರಹ ಅವರು ಹೇಳುವ ಕಥೆಗಳನ್ನು ಕೇಳುವುದು ತುಂಬಾ ಇಷ್ಟವಾಗುತ್ತಿತ್ತು.

ಒಂದು ದಿನ ಬಾಬ್ಬ್ಯಜಾರೃಹ, ನಿಕೊಲೈನ್ ಕಾಲು

ಚೀಲದಲ್ಲಿ ಸಣ್ಣತೂತನ್ನುಕಂಡಳು. ಮಕ್ಕಳೆಲ್ಲರೂ ಕಥೆಕೇಳಿ ಹೋದಮೇಲೆ, ಬಾಬ್ಬ್ಯಜಾರೃಹ ನಿಕೊಲೈಗಾಗಿ ಬೆಚ್ಚಗಿರುವ, ಸುಂದರವಾದ ಕಾಲುಚೀಲವನ್ನು ಹೆಣ್ಣಿಯಬೇಕೆಂದು ಯೋಚಿಸಿದಳು. ಆದರೆ ಆ ಚಳ್ಳಿಯಲ್ಲಿ, ಎಷ್ಟು ಮಂಜು ಬಿದ್ದಿತ್ತಂದರೆ ಉಣ್ಣೆ ಮಾರಲು ಯಾರಿಗೂ ಅವರ ಹಳ್ಳಿಗೆ ಬರಲು ಸಾದ್ಯವಿರಲಿಲ್ಲ. ಉಣ್ಣೆಇಲ್ಲದೆ ಕಾಲುಚೀಲ ಹೆಣ್ಣೆಯಲು ಹೇಗೆ ಸದ್ಯ?

ಬಾಬ್ಬ್ಯ ಜಾರೃಹ ಯೋಚಿಸುತ್ತಾ, ತಾವು ತಮಗೆ ಹೇಳಿಕೊಂಡರು, "ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರವಿದೆ". "ನಾನು ಸ್ವಲ್ಪ ಚಿಂತನೆ ಮಾಡಬೆಕ್ಕು, ಅಷ್ಟೇ". ಒಂದು ಗ್ಲಾಸ್ ಸಕ್ಕರೆ ಚಹಾ ಕುಡಿಯುತ್ತ ಈ ಸಮಸ್ಯೆಗೆ ಪರಿಹಾರ ಯೋಚಿಸಲಾರಂಭಿಸಿದರು. ಮೂರೇ ಮೂರೂ ಗುಟುಕು ಚಹಾಕುಡಿಯುವಷ್ಟರಲ್ಲಿ ಅವರಿಗೆ ಸಮಸ್ಯೆಯ ಪರಿಹಾರ ಸಿಕ್ಕಿತ್ತು, ಬಾಬ್ಬ್ಯ ಜಾರೃಹಗೆ ಅವರು ಏನು ಮಾಡಬೇಕೆಂದು ತಿಳಿದುಹೋಯಿತು.

ಅವರು ತಮ್ಮ ಮನಸಿನಲ್ಲೇ ಅಂದುಕೊಂಡರು, "ನಾನು ಕಥೆಗಳ ಕಂಬಳಿ ಯಿಂದ ಸ್ವಲ್ಪ ಉಣ್ಣೆ ತೆಗೆದು ನಿಕೊಲೈಗಾಗಿ ಕಾಲುಚೀಲ ಹೆಣ್ಣೆಯುವೇನು".

ಅರ್ಧ ರಾತ್ರಿಯ ಹೊತ್ತಿನಲ್ಲಿ,ಎಲ್ಲರೂ ನಿದ್ದೆ ಮಾಡುತಿರುವಾಗ ಬಾಬ್ಬ್ಯಜಾರ್ರ್ಯಹ, ಮಂಜಿನಲ್ಲಿ ನಿಧಾನವಾಗಿ ನಡೆದು ನಿಕೊಲ್ಯೆ ಮನೆಯ ಬಾಗಿಲಲ್ಲಿ ಅವನಿಗಾಗಿ ಹೆಣ್ಣ್ಣಾದ ಕಾಲುಚೀಲವನ್ನು ಇಟ್ಟ್ಟು ಮರಳಿದರು.

ಕೆಲವು ದಿನಗಳ ನಂತರ, ಬೆಳಬೆಳಗ್ಗೆ ಅಂಚೆಯವನಿಗೆ ಅವನ ಅಂಚೆ ಚೀಲದ ಮೇಲೆ ಒಂದು ಮಡಿಚಿಟ್ಟಿರುವ ಸ್ಕಾರ್ಫ್ ಸಿಕ್ಕಿತ್ತು. "ಈ ಸ್ಕಾರ್ಫ್ ನ್ನು ಯಾರು ಹೆಣ್ಣೆದಿದ್ದರೆ ನಿಮಗೆ ಗೊತ್ತಾ?, ಎಂದು ಅಂಚೆಯವನು ಸಿಕ್ಕ ಸಿಕ್ಕವರನ್ನೆಲ್ಲ ಕೇಳಿದನ್ನು. ಆದರೆ ಇದರ ಬಗ್ಗೆ ಯಾರಿಗೂ ಮಾಹಿತಿ ಇರಲಿಲ್ಲ.

ಶಾಲೆಯ ಅಧ್ಯಾಪಕರು ಮಕ್ಕಳಿಗಾಗಿ ಬೆಂಕಿ ಕಾಯಲು ಸೌದೆಯನ್ನು ತರಲು ಹೋದಾಗ, ಸೌದೆಯ ರಾಶಿಯ ಮೇಲೆ ಒಂದು ಜೊತೆಯ ಕೈಚೀಲಗಳನ್ನು ಕಂಡು ಆಶ್ಚರ್ಯಗೊಂಡರು!

ಮಿಸಸ್. ಇವನೊವಾನೆ ತನ್ನಗೆ ಪಂಪಿನ ಬಳ್ಳಿ ಸಿಕ್ಕ ಉಣ್ಣೆಯ ಏಪ್ರನ್ [ಅಡುಗೆಯ ಮೇಲಂಗಿ] ನ್ನು ಜಾಡಿಸಿ ಅವಳ ಒಗೆದ ಬಟ್ಟೆಯ ಮೇಲೆ ಕುತ್ತಿದ್ದ ಕಾಗೆಯನ್ನು ಹಾರಿಸಿದಳು.

ಶೀಘ್ರವೇ, ಆ ಕಿರಾಣಿ ಅಂಗಡಿ ನಡೆಸುವ ಹೆಂಗಸು, ಚಿಟ್ಟೆ ತಿಂದಂತಿದ್ದ ಹಳೆಯ ಶಾಲ್ ಬದಲಿಗೆ ಒಂದು ಹೊಸಾ, ಉಣ್ಣೆಯಿಂದ ಹೆಣ್ಣದ ಶಾಲನ್ನು ಹೊದ್ದುಕೊಂಡಿದ್ದಳು.

ಈಗ ಕಥೆ ಕೇಳಲು ಬಂದಾಗ ಮಕ್ಕಳು ಕಂಬಳಿಯ ಮೇಲೆ ಒಬ್ಬರಿಗೊಬ್ಬರು ಹತ್ತಿರವಾಗಿ ಕುಳಿತುಕೊಳ್ಳಬೇಕಾಯಿತು.

ದಿನೇ ದಿನೇ ಗ್ರಾಮಸ್ಥರ ಕುತೂಹಲ ಹೆಚ್ಚಾಯಿತು.

ಪುಟ್ಟ ಒಲಗ ಗೆ ಒಂದು ಹೊಸ, ಮೃದುವಾದ ಮಕ್ಕಳ ಕಂಬಳಿ ಸಿಕ್ಕಿತು ಮತ್ತು ಕಸಾಯಿಯವನ್ನು ತನ್ನ ಹೊಳೆಯುವ ಬೋಳು ತಲೆಯನ್ನು ಮುಚ್ಚಿದ್ದ ಆ ಸುಂದರವಾದ ಉಣ್ಣೆಯ ಟೋಪಿಯನ್ನು ಜಂಬದಿಂದ ಪ್ರದರ್ಶಿಸಿದನು.

ಬಾಬ್ಬಜಾರ್ರಹ ಅವರ ಮನೆಯಲ್ಲಿ ಮಕ್ಕಳು ಈಗ ಒಬ್ಬರನೊಬ್ಬರು ಆಂಟಿಕೊಂಡು ಕುಳಿತು ಕಥೆ ಕೇಳುತ್ತಿದ್ದರು.

ದರ್ಜಿಯ ಸೊರಗಿದ ಬೆಕ್ಕು ಥಟ್ಟನೆ, ಹಿತಕರವಾದ, ಉಣ್ಣೆಯ ಬೆಕ್ಕಿನ ಕೋಟಿನಲ್ಲಿ ಗುನುಗುತ್ತಾ ಗಂಭೀರವಾಗಿ ಕಣ್ಣಿಸಿಕೊಂಡಾಗ ಹಳ್ಳಿಗರು ಇನ್ನಷ್ಟು ಗೊಂದಲಕ್ಕೊಳಗಾದರು.

ಈಗ ಮಕ್ಕಳಿಗೆ ಕುಳಿತುಕೊಳ್ಳಲು ಕಂಬಳಿ ಇರಲಿಲ್ಲ.

ಹಳ್ಳಿಯ ಜನರು ಈ ರಹಸ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಲು ತಮ್ಮ ಮೇಯರ್ ನ್ನು ಕೇಳ್ಳಿಕೊಂಡರು.

"ಬಾಬ್ಬಜಾರ್ರಹ ಯಾವಾಗಲು ಏನು ಹೇಳುತ್ತಾರೆ ಎಂದು ನಿಮಗೆ ಗೊತ್ತುಂಟಾ?", ಮೇಯರ್ ಹೇಳಿದರು, "ಪ್ರತಿಯೊಂದು ಪ್ರಶ್ನೆಗೂ ಒಂದು ಉತ್ತರವಿದೆ".

ಮಕ್ಕಳು ಕೈಚೀಲಾ, ಕಾಲ್ ಚಿಲಾ, ಏಪ್ರನ್, ಟೋಪಿ, ಸ್ಕ್ಯಾರ್ಫ, ಶಾಲ್, ಬೇಬಿ ಕಂಬಳಿ, ಬೆಕ್ಕಿನ ಕೋಟ್ ಎಲ್ಲವನ್ನು ಒಟ್ಟಿಗೆ ನೋಡಿದಾಗ ಅವರು ಒಮೆಲ್ಲೆ ಕಿರುಚಿದರು, "ಇದು ಬಾಬ್ಬಜಾರ್ರಹ ಅವರ ಕಥೆಗಳ ಕಂಬಳಿ ತರಹನೇ ಇದೆ ".

ನಿಕೊಲೈ ಹೇಳಿದ, "ಆದರೆ ಈಗ ಅವರ ಹತ್ತಿರ ಕಂಬಳಿಯೆ ಇಲ್ಲ"

"ಆಹಾ" ಮೇಯರ್ ಹೇಳಿದರು, ಬಾಬ್ಬಜಾರ್ರಹ ಅವರ ಕಂಬಳಿಯ ಉಣ್ಣೆ ಯಿಂದ ಈ ಎಲ್ಲ ವಸ್ತುಗಳನ್ನು ಮಾಡಿದ್ದರೆ.

"ಈಗ ನಮ್ಮ ಬಾರಿ, ಬಾಬ್ಬಜಾರ್ರಹ ಅವರನ್ನು ನಾವು ಆಶ್ಚರ್ಯಗೊಳಿಸೋಣ".

ಬಾಬ್ಬುಜಾರ್ರುಹ ಅವರು ಮಲಗಿರುವಾಗ, ಎಲ್ಲಾ ಮನೆಯೆಲ್ಲೊ, ಪ್ರತಿಯೊಂದು ಕಂಬಳಿಯಿಂದ ಸ್ವಲ್ಪ-ಸ್ವಲ್ಪ ಉಣ್ಣೆಯನ್ನು ಬಿಚ್ಚಿ, ಉಣ್ಣೆಯನ್ನು ಒಟ್ಟುಗೂಡಿಸಿ ಬಾಬ್ಬುಜಾರ್ರುಹವರ ಮನೆಯ ಹೊಸಿಲಲ್ಲಿ ಇಟ್ಟುಬಿಟ್ಟರು.

ಮುಂಜಾನೆ ಬಾಬ್ಬುಜಾರ್ರುಹ ಅವರು ಬಾಗಿಲು ತೆಗೆದಾಗ ಅವರು ಆಶರ್ಯಚಕಿತರಾದರು. ಅಷ್ಟೋಂದು ವಿವಿದ ಬಣ್ಣದ, ಆಷ್ಟೊಂದು ಉಣ್ಣೆಯನ್ನು ಅವರು ಒಟ್ಟಿಗೆ ಯಾವತ್ತೂ ನೋಡಿರಲಿಲ್ಲ. ಉಣ್ಣೆಯ ಮೇಲೆ ಇಟ್ಟಿದ್ದ ಒಂದು ಫಲಕದ ಮೇಲೆ ಬರದ್ದಿತ್ತು...



ಮಕ್ಕಳು ಕಥೆ ಕೇಳಲು ಮುಂದಿನ ಸಲ ಬಾಬ್ಬಜಾರ್ರೃಹ ಅವರ ಮನೆಗೆ ಬಂದಾಗ ಅವರುಒಂದು ಹೊಸ, ವಿವಿದ ಬಣ್ಣ-ಬಣ್ಣಗಳ ಕಂಬಳಿಯನ್ನು ಕಂಡರು. ಅದರ ಮೇಲೆ ಕುಳಿತು ಅವರು ಆ ಹಳ್ಳಿಯ ಬಗ್ಗೆ ಕಥೆಯನ್ನುಕೇಳಿದರು, ಏವಾ ಹಳ್ಳಿಯಲ್ಲಿ ಜನರು ವಸ್ತುಗಳನ್ನು ಪರಸ್ಪರ ಹಂಚಿಕೊಂಡು ಸಂತೋಷವಾಗಿ ಜೀವಿಸುತಿದ್ದರೋ, ಆ ಹಳ್ಳಿ.

ಮಕ್ಕಳು ಮರಳಿ ಹೋಗುತ್ತಿದ್ದಾಗ, ಬಾಬ್ಬಜಾರ್ರೃಹ ಅವರು ಅಲೆಕ್ಸಾಂಡರ್ ನ ಸ್ವೇಟರ್ ನಲ್ಲಿ ಒಂದು ತೂತನ್ನು ಕಂಡರು. ಬಾಬ್ಬಜಾರ್ರೃಹ ಅವನಿಗೆ ಒಂದು ಉಣ್ಣೆಯ ಹೊಸ ಸ್ವೇಟರ್ ಹೆಣ್ಣದು ಅವನಿಗೆ ಅನಿರೀಕ್ಷತವಾಗಿ ಕೊಡಬೇಕ್ಕೆಂದುಕೊಂಡರು, ಆದರೆ ಬೆಟ್ಟದ ಮೇಲೆ ಇನ್ನು ಬಹಳಷ್ಟು ಮಂಜಿತ್ತು ಮತ್ತು ಹಳ್ಳಿಯಲ್ಲಿ ಯಾರ ಮನೆಯಲ್ಲೂ ಉಣ್ಣೆ ಇರಲಿಲ್ಲ.

ಪ್ರತಿಯೊಂದು ಪ್ರಶ್ನೆಗು ಒಂದು ಉತ್ತರವಿದೆ ಎಂದು ಬಾಬ್ಬಜಾರ್ರೃಹ ಅವರಿಗೆ ತಿಳಿದಿತ್ತು, ಅವರು ಅವರ ಹೊಸ ಕಂಬಳಿಯನ್ನು ನೋಡಿ ಮುಗುಳ್ನಕ್ಕರು ...!!!!